ಅಧ್ಯಕ್ಷರು.—ಯಾರು, ಎಲ್ಲಿ, ಎಷ್ಟು ಹಣ ತಿಂದಿದ್ದಾರೆ ಎಂಬುದನ್ನು ಬರೆದು ಕಳುಹಿಸಿ ಎನ್‌ಕ್ವೈರಿ ಮಾಡಿಸುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಷ್ಟು ಬೇಡ. ಹಣ ದುರುಪಯೋಗವಾಗಿದೆ ಎಂದು ಯಾರ ಮೇಲೆ ಅವರಿಗೆ ಸಂಶಯ ಬಂದಿದೆ ಅದನ್ನು ಮಾನ್ಯ ಸದಸ್ಯರು ಬರೆದು ಕೊಟ್ಟರೆ ನಾನು ತನಿಖೆ ಮಾಡಿಸುತ್ತೇನೆ.

ಮೈಸೂರಿನ ಗಂಧದ ಎಣ್ಣೆ ಕಾರ್ಖಾನೆ ಬಗ್ಗೆ

೧೬೨೨. ಶ್ರೀವೇದಾಂತ ಪೆಮ್ಮಗ (ಕೃಷ್ಣರಾಜ).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಕಳೆದ ೨ ವರ್ಷಗಳಿಂದ ತಯಾರಾಗಿರುವ ಗಂಧದ ಕಡ್ಡಿ ಮೌಲ್ಯವೆಷ್ಟು ?

ಆ) ಕೊನೆಯ ೩ ವರ್ಷಗಳಲ್ಲಿ ಎಷ್ಟು ಮೌಲ್ಯದ ಗಂಧದ ಕಡ್ಡಿ ಮಾರಾಟ ಮಾಡಲಾಗಿದೆ ?

ಇ) ವಿದೇಶಗಳಿಗೆ ಮಾರಾಟ ಮಾಡಿರುವುದೆಷ್ಟು, ಸ್ವದೇಶದಲ್ಲಿ ಆಗಿರುವ ಮಾರಾಟವೆಷ್ಟು ?

ಶ್ರೀ ಜೆ. ಹೆಚ್. ಪಟೇಲ್ (ಭಾರೀ ಹಾಗೂ ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಸಚಿವರು).—

ಅ) ಕಳೆದ ೩ ವರ್ಷಗಳಿಂದ (ಕೆ. ಎಸ್. ಮತ್ತು ಡಿ. ಎಲ್.ನಲ್ಲಿ) ತಯಾರಾದ ಗಂಧದ ಕಡ್ಡಿ ಮೌಲ್ಯ ಈ ಕೆಳಗಿನಂತಿದೆ.

ವರ್ಷ	ಮೌಲ್ಯ ಲಕ್ಷ ರೂ. ಗಳಲ್ಲಿ	
೧೯೫೫-೫೬	೫೬.೭೫	ಸ್ವದೇಶದಲ್ಲಿ
೧೯೫೬-೫೭	೪೦.೭೨	
೧೯೫೭-೫೮	೪೨.೦೦	

ಆ) ಕೊನೆಯ ಮೂರು ವರ್ಷಗಳಲ್ಲಿ ಎಂ.ಎಸ್.ಐ.ಎಲ್. ಮುಖಾಂತರ ಮಾರಾಟವಾದ ಗಂಧದ ಕಡ್ಡಿಯ ಮೌಲ್ಯ ಈ ಕೆಳಗಿನಂತಿದೆ.

ವರ್ಷ	ಮೌಲ್ಯ ಲಕ್ಷ ರೂ. ಗಳಲ್ಲಿ
೧೯೫೫-೫೬	೫೭.೩೦
೧೯೫೬-೫೭	೫೭.೧೮
೧೯೫೭-೫೮	೪೮.೯೩

ಇ)

ವರ್ಷ	ಸ್ವದೇಶದಲ್ಲಿ (ಲಕ್ಷ ರೂ. ಗಳಲ್ಲಿ)	ವಿದೇಶದಲ್ಲಿ (ಲಕ್ಷ ರೂ. ಗಳಲ್ಲಿ)
೧೯೫೫-೫೬	೫೭.೩೦	೦.೦೯
೧೯೫೬-೫೭	೫೭.೧೮	—
೧೯೫೭-೫೮	೪೮.೯೩	೨.೦೦

(ಎಂ. ಎಸ್. ಐ. ಎಲ್‌ನಿಂದ ಆದ ಪಹಿವಾಟು)

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ೧೯೮೫-೮೬ರಲ್ಲಿ ೫೬.೭೫ ಲಕ್ಷ ೧೯೮೬-೮೭ರಲ್ಲಿ ೪೨ ಲಕ್ಷ ರೂಪಾಯಿನ ಗಂಧದ ಕಡ್ಡಿ ತಯಾರಿಸಲಾಗಿದೆ. ಅಂದರೆ ೧೪ ಲಕ್ಷ ರೂಪಾಯಿನ ಗಂಧದ ಕಡ್ಡಿ ಉತ್ಪಾದನೆ ಕಡಿಮೆಯಾಗಿದೆ. ಇದಕ್ಕೆ ಪ್ರಮುಖ ಕಾರಣ ಏನು ? ಉತ್ತರದಲ್ಲಿ ೧೯೮೫-೮೬ರಲ್ಲಿ ೧೬.೭೫ ಲಕ್ಷ ಬೆಲೆ ಬಾಳುವ ಗಂಧದ ಕಡ್ಡಿ ತಯಾರಾಗಿದ್ದರೆ ಮಾರಾಟವಾಗಿರುವುದು ೫೭.೩೦ ಲಕ್ಷ ರೂಪಾಯಿಗಳ ಗಂಧದ ಕಡ್ಡಿ ಎಂದು ಹೇಳಿದ್ದಾರೆ. ೧೯೮೬-೮೭ರಲ್ಲಿ ೪೦.೭೨ ಲಕ್ಷ ರೂಪಾಯಿನ ಗಂಧದ ಕಡ್ಡಿ ತಯಾರಾಗಿದ್ದರೆ ಮಾರಾಟವಾಗಿರುವುದು ೫೭.೧೯ ಲಕ್ಷ ರೂಪಾಯಿನ ಗಂಧದ ಕಡ್ಡಿ. ೧೯೮೭-೮೮ರಲ್ಲಿ ೪೨.೦೦ ಲಕ್ಷ ರೂಪಾಯಿನ ಗಂಧದ ಕಡ್ಡಿ ತಯಾರಾಗಿದ್ದರೆ ೪೮.೯೩ ಲಕ್ಷ ರೂಪಾಯಿ ಗಂಧದ ಕಡ್ಡಿ ಮಾರಾಟವಾಗಿದೆ ಎಂದು ಹೇಳಿದ್ದಾರೆ. ಹೀಗೆ ಉತ್ಪಾದನೆ ಮತ್ತು ಮಾರಾಟದಲ್ಲಿ ವ್ಯತ್ಯಾಸ ಯಾಪಾರೀತಿ ಬಂತು. ಮೂರನೆಯದಾಗಿ ನಮ್ಮ ದೇಶದ ಯಾವ್ಯಾವ ಮೂಲೆಗಳಲ್ಲಿ ಇದರ ಮಾರಾಟವಾಗುತ್ತಿದೆ ? ಯಾವ ವಿಜೆನ್ಸ್ ಮೂಲಕ ಇದರ ಮಾರಾಟವಾಗುತ್ತಿದೆ ಎಂಬುದನ್ನು ತಿಳಿಸಬೇಕು ?

ಶ್ರೀ ಜೆ. ಎಚ್. ಪಟೇಲ್.—ಉತ್ಪಾದನಾ ಬೆಲೆಗೂ ಮಾರಾಟದ ಬೆಲೆಗೂ ವ್ಯತ್ಯಾಸ ಏಕೆ ಆಂತ ಮಾನ್ಯ ಸದಸ್ಯರು ಕೇಳಿದ್ದಾರೆ. ಈ ವರ್ಷದಲ್ಲಿ ೫೬ ಲಕ್ಷ ರೂಪಾಯಿಗಳ ಮೌಲ್ಯವನ್ನು ಉತ್ಪಾದನೆ ಮಾಡಿದ್ದೇವೆಂದರೂ ೬೦ ಲಕ್ಷ ರೂಪಾಯಿಗಳ ಮೌಲ್ಯವನ್ನು ಮಾರಾಟ ಮಾಡಿರುವಾಗ ಈ ವರ್ಷದ ಸ್ಟಾಕು ಏನು ಇತ್ತು ಮತ್ತು ಹಿಂದಿನ ವರ್ಷದ್ದು ಏನು ಇತ್ತು ? ಇವುಗಳೆಲ್ಲಾ ಕಾರಣಗಳು ಇರುತ್ತವೆ ಈ ವರ್ಷ ಉತ್ಪಾದನೆ ಮಾಡಿದಂತಹ ಮೌಲ್ಯವನ್ನು ಈ ವರ್ಷವೇ ಚುಕ್ತ ಮಾಡಬೇಕೆಂದೆನೂ ಇಲ್ಲ. ಈ ವರ್ಷ ಉತ್ಪಾದನೆ ಮಾಡಿದಂತಹ ಮೌಲ್ಯವನ್ನು ಸ್ಟಾಕ್ ಇಟ್ಟರೆ ಮುಂದಿನ ವರ್ಷ ಸ್ವಲ್ಪ ಬೆಲೆ ಜಾಸ್ತಿ ಸಿಕ್ಕಬಹುದು. ಉತ್ಪಾದನೆ ಮಾಡಿದಂತಹ ಮೌಲ್ಯಕ್ಕೆ ಮೀರಿ ಲಾಭ ಜಾಸ್ತಿ ಸಿಕ್ಕಬಹುದು. ಇದನ್ನು ಮಾರಾಟ ಮಾಡುತ್ತಿರುವಂತಹ ಕಚೇನ್ನು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಈ ಸಂಸ್ಥೆಯ ಮೂಲಕ ಮಾರಾಟ ಮಾಡುತ್ತಿದ್ದೇವೆ. ಕಡಿಮೆ ಏಕೆ ಆಯಿತು ಅಂತ ಕೇಳುತ್ತಿದ್ದಾರೆ. ಉತ್ಪಾದನೆ ಸಹ ಕಡಿಮೆ ಆಯಿತೆಂದು ಕೇಳುತ್ತಿದ್ದಾರೆ. ಗಂಧದ ಕಡ್ಡಿಯ ಉತ್ಪಾದನೆಯಲ್ಲಿ ರಾಷ್ಟ್ರದಲ್ಲಿ ಮಾಗಡಿ ನಮ್ಮ ರಾಜ್ಯದಲ್ಲಿ ತೀರ್ಥಹಳ್ಳಿ ಪ್ರಸಿದ್ಧವಾದ ಪ್ಲೇಸ್‌ಗಳು ಇವೆ. ಖಾಸಗಿಯವರಲ್ಲಿರತಕ್ಕ ಕಂಪನಿಗಳು ಆದರೆ ಅವ ಕಾರಣದಿಂದ ಅತಿ ಹೆಚ್ಚಿನ ಕಾಲಿಟಿಯ ಗಂಧದ ಕಡ್ಡಿಯನ್ನು ಮಾರಾಟ ಮಾಡುತ್ತಾರೆ. ಇದು ಬಳಕೆದಾರರ ಗ್ರೂಪ್ಸ್ ಆಗಿರುವುದರಿಂದ ಇದಕ್ಕೆ ನಿಗದಿಯಾದ ಬೆಲೆಯನ್ನು ನಿಗದಿ ಮಾಡಿ ಮಾರಾಟ ಮಾಡುವುದಕ್ಕಾಗುವುದಿಲ್ಲ. ಪ್ರತಿ ದಿನವೂ ಕಾಂಪಿಟೇಷನ್ ಇರುತ್ತದೆ, ಊದಿನ ಕಡ್ಡಿ ವ್ಯಾಪಾರ ಆಪ್ಟೇ ವೇಗವಾಗಿ, ಅಷ್ಟೇ ಬಿರುಸಾಗಿ ಹೆಚ್ಚುತ್ತಿದೆ. ಆ ಕಾರಣದಿಂದಾಗಿ ಕೊರತೆ ಕಂಡುಬರುತ್ತದೆ. ಮೊದಲು ಎಕ್ಸ್‌ಪೋರ್ಟ್ ಆರ್ಡರ್ ಇತ್ತು. ಈಗ ಅಷ್ಟಾಗಿ ಎಕ್ಸ್‌ಪೋರ್ಟ್ ಆಗುತ್ತಿಲ್ಲ, ಅದು ಅಂತರರಾಷ್ಟ್ರೀಯ ಕಾರಣಗಳಿಗೋಸ್ಕರವಾಗಿ.

ಶ್ರೀ ವೇದಾಂತ ಹೆಮ್ಮಿಗೆ.—ಖಾಸಗಿ ವಲಯದಲ್ಲಿರತಕ್ಕ ಗಂಧದ ಕಡ್ಡಿ ಕಾರ್ಖಾನೆಗಳವರು ಗಂಧದ ಕಡ್ಡಿಯನ್ನು ತಯಾರು ಮಾಡಿ ವಿದೇಶಕ್ಕೆ ಒಂದು ಕೋಟಿ ರೂಪಾಯಿಗಳಿಗಿಂತಲೂ ಜಾಸ್ತಿ ರಫ್ತು ಮಾಡಿ ರಾಷ್ಟ್ರಪ್ರಶಸ್ತಿಯನ್ನು ಪಡೆದಂತಹವರು ಮೈಸೂರು ನಗರದಲ್ಲಿ ಇಬ್ಬರು ಖಾಸಗಿ ಕಂಪನಿಯ ಮಾಲೀಕರು ಇದ್ದಾರೆ. ವಿದೇಶದಲ್ಲಿ ಕರ್ನಾಟಕದಲ್ಲಿ ತಯಾರಾಗತಕ್ಕ ಗಂಧದ ಕಡ್ಡಿ ಹಾಗೂ ಗಂಧದ ಎಣ್ಣೆಗೆ ಹೆಚ್ಚು ಬೇಡಿಕೆ ಇದೆ. ಅದನ್ನು ಖಾಸಗಿ ಮಾಲೀಕರು ತಯಾರು ಮಾಡಿ ಲಾಭ ಮಾಡುತ್ತಿರುವಾಗ ಸರ್ಕಾರದ ಕಂಪನಿ ಅದೇ ರೀತಿಯ ಗಂಧದ ಕಡ್ಡಿಯನ್ನು ತಯಾರು ಮಾಡಿ ವಿದೇಶಗಳಲ್ಲಿ ಇದರ ಮಾರಾಟಕ್ಕೆ ಯಾವ ವ್ಯವಸ್ಥೆ ಮಾಡಿದ್ದೀರಿ ? ಇದರ ಪ್ರಚಾರಕ್ಕೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ? ಖಾಸಗಿಯವರು ತಯಾರು ಮಾಡತಕ್ಕ ಗಂಧದ ಕಡ್ಡಿ ವಿದೇಶಕ್ಕೆ ಹೋಗುತ್ತಿರಬೇಕಾದರೆ, ಮೈಸೂರಿನ ಗಂಧದ ಕಡ್ಡಿ ಎಂದು ಪ್ರಖ್ಯಾತವಾಗಿರುವ ಸರ್ಕಾರಿ ಕಂಪನಿ ತಯಾರು ಮಾಡುತ್ತಿರುವಂತಹ ಗಂಧದ ಕಡ್ಡಿಗೆ ಏಕೆ ಬೇಡಿಕೆ ಬಂದಿಲ್ಲ ? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ? ಎರಡನೆಯದಾಗಿ ಸುಮಾರು ೧ ಸಾವಿರ ಜನರಿಗೆ ಉದ್ಯೋಗವನ್ನು ಕೊಟ್ಟು ಮೈಸೂರು ಖಾಸಗಿ ಗಂಧದ ಕಡ್ಡಿ ಕಂಪನಿಯವರು ಬರೀ ಗಂಧದ ಕಡ್ಡಿಯಿಂದ ಕೋಟಿಗಟ್ಟಲೆ ಲಾಭ ಮಾಡುತ್ತಿದ್ದಾರೆ. ಆದರೆ ನಮ್ಮಲ್ಲಿ ೨೫೦ ಜನರನ್ನು ಇಟ್ಟುಕೊಂಡು ಅವರಿಗೆ ಕೆಲಸವನ್ನೇ ಕೊಡದೆ ಇರತಕ್ಕ ಪರಿಸ್ಥಿತಿ ಬಂದಿದೆಯಲ್ಲಾ ಇದಕ್ಕೆ ಕಾರಣವೇನು ? ದಯವಿಟ್ಟು ತಿಳಿಸಬೇಕು.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಸದಸ್ಯರಿಗೆ ಪೂರ್ತಿ ಪ್ರಶ್ನೆ ಹಾಕಬೇಕಾಗುತ್ತದೆ. ಏನೆಂದರೆ ಇದನ್ನೂ ಖಾಸಗಿ ಕಂಪನಿಯವರಿಗೆ ಕೊಟ್ಟುಬಿಡೋಣವೆ ಎಂದು. ಖಾಸಗಿ ವಲಯದಲ್ಲಿ ಇರತಕ್ಕ ಉದ್ದಿಮೆ ಏನು ಇದೆ, ಆವರು ಗಂಧದ ಕಡ್ಡಿಯನ್ನೂ ತಯಾರು ಮಾಡುತ್ತಾರೆ, ಎಕ್ಸ್‌ಪೋರ್ಟ್ ಕೂಡ ಮಾಡುತ್ತಾರೆ. ಆದರೆ ನಮ್ಮದು ಸಾರ್ವಜನಿಕ ಉದ್ದಿಮೆ. ಖಾಸಗಿಯವರು ಸಾವಿರಾರು ಜನಗಳನ್ನು ನೇಮಕ ಮಾಡಿಕೊಳ್ಳುತ್ತಾರೆ. ಹಲವಾರು ರೀತಿಯ ಇನ್‌ಪುಟ್ಸ್ ಅಂತ ಏನು ನಾವು ಕರೆಯುತ್ತೇವೆ, ಅಂತಹ ಸುಗಂಧಗಳನ್ನು ತಂದು ಮಾಡುತ್ತಾರೆ. ಆದರೆ ನಮ್ಮ ಈ ಸಾರ್ವಜನಿಕ ಉದ್ದಿಮೆಯಲ್ಲಿ ಮೂಲ ಉದ್ದೇಶ ಇರುವಂತಹದ್ದು ಗಂಧದ ಎಣ್ಣೆಯನ್ನು ತೆಗೆಯುವಂತಹದ್ದು. ಅದರ ಕುಂಠಿತವಾಗಿರುವುದರಿಂದ, ಜಾಸ್ತಿ ಜನ ಇದ್ದಾರಲ್ಲಾ ಅಂತ ಅವರನ್ನು ಗಂಧದ ಕಡ್ಡಿಯನ್ನು ತಯಾರು ಮಾಡುವುದಕ್ಕೆ ಹಚ್ಚಿದ್ದೇವೆ. ಆದರೆ ನಾವು ಖಾಸಗಿಯವರೊಡನೆ ಕಾಂಪಿಟ್ ಮಾಡುವುದಕ್ಕೆ ಬಂಡವಾಳ ಬೇಕು. ಮತ್ತು ವಿದೇಶಗಳಲ್ಲಿ ಇದರ ಬಗ್ಗೆ ಪ್ರಚಾರ ಇಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಇದರ ಬಗ್ಗೆ ವಿಚಾರ ಮಾಡುತ್ತೇನೆ. ಪ್ರಚಾರ ಇಲ್ಲ ಅಂತ ಅಲ್ಲ. ಇವತ್ತು ಬೇರೆಯವರಿಗೆ ಸರಿಸಮಾನವಾದಂತಹ ಕ್ವಾಲಿಟಿಯನ್ನು ಮೈನ್‌ಟೈನ್ ಮಾಡುವುದರ ಬಗ್ಗೆ ಪ್ರಚಾರ ಬೇಕು. ಅದೇ ಏಕೆ, ಗಂಧದ ಎಣ್ಣೆ ಗೊತ್ತಿರತಕ್ಕಂತಹವರು, ಅದೇ ರೀತಿ ಮೈಸೂರು ಸ್ಯಾಂಡಲ್ ಸೋಪ್ ಗೊತ್ತಿರತಕ್ಕಂತಹ ಜನ ಪ್ರಪಂಚದ ಎಲ್ಲ ಕಡೆಯೂ ಇದ್ದಾರೆ. ಆದರೆ ಖಾಸಗಿ ಕಂಪನಿಯವರ ಜೊತೆಗೆ ಕಾಂಪಿಟ್ ಮಾಡುವಂತಹ ಸ್ಟ್ಯಾಂಡರ್ಡ್ ನಮ್ಮದು ಇಲ್ಲ.

ಗಂಗಾವತಿ ತಾಲ್ಲೂಕಿನಲ್ಲಿರುವ ಹಾಲು ಉತ್ಪಾದಕರ ಸಂಘಗಳು

೨೬೮೦. ಶ್ರೀ ರಂಗದೇವರಾಯಲು, (ಕನಕಗಿರಿ).—ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ಪಕ್ಷ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗಂಗಾವತಿ ತಾಲ್ಲೂಕಿನಲ್ಲಿರುವ ಹಾಲು ಉತ್ಪಾದಕರ ಸಂಘಗಳು ಎಷ್ಟು ?

ಆ) ಆ ಪೈಕಿ ಸಮರ್ಪಕವಾಗಿ ಮತ್ತು ಅಸಮರ್ಪಕವಾಗಿ ಕೆಲಸ ನಡೆಸುತ್ತಿರುವ ಸಂಘಗಳು ಎಷ್ಟೆಷ್ಟು ?

ಇ) ಅಸಮರ್ಪಕವಾಗಿ ಕೆಲಸ ನಿರ್ವಹಿಸುತ್ತಿರುವ ಸಂಘಗಳ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್, (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳು ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ೨೨

ಆ) ೫ ಸಂಘಗಳನ್ನು ಕಾರ್ಯಾಚರಣೆಗೊಳಿಸಲಾಗಿದ್ದು, ಅವು ಸಮರ್ಪಕವಾಗಿ ಕೆಲಸ ನಡೆಸುತ್ತಿವೆ. ೧೭ ಸಂಘಗಳನ್ನು ಕಾರ್ಯಾಚರಣೆಗೊಳಿಸಲಾಗಿಲ್ಲ.

ಇ) ಕಾರ್ಯಾಚರಣೆಗೊಳಿಸಲಾಗದ ೧೭ ಸಹಕಾರ ಸಂಘಗಳನ್ನು ಗಂಗಾವತಿ ಶೀತಲೀಕರಣ ಕೇಂದ್ರ ಪ್ರಾರಂಭವಾದ ನಂತರ ಕಾರ್ಯಾಚರಣೆಗೊಳಿಸಲಾಗುವುದು.

೩-೦೦ ಪಿ.ಎಂ.

ಶ್ರೀ ಶ್ರೀ. ರಂಗದೇವರಾಯಲು.—ಅಧ್ಯಕ್ಷರೇ, ಅಲ್ಲಿ ೨೨ ಸೊಸೈಟಿಗಳು ಶೇರ್ ಹಣವನ್ನು ಕಟ್ಟಿವೆ. ಆದರೆ ಇವುಗಳಲ್ಲಿ ಕೇವಲ ೫ ಸೊಸೈಟಿಗಳನ್ನು ಕಾರ್ಯಗತ ಮಾಡಿದ್ದೀರಿ ಎಂದರೇ ಶೇಕಡಾ ೨೫ಕ್ಕಿಂತಲೂ ಇದು ಕಡಿಮೆ ಆಯಿತು. ಈ ಜನರು ಬಹಳ ಸಾರಿ ಜಿಲ್ಲಾಮಂತ್ರಿಗಳಿಗೆ ಭೇಟಿ ಮಾಡಿ ಮೆಮೋರಾಂಡಂಗಳನ್ನು ಕೊಟ್ಟಿರುತ್ತಾರೆ. ಇವರು ರಿಜಿಸ್ಟ್ರ ಮಾಡುತ್ತಲೇ ಇದ್ದಾರೆ ಅದಷ್ಟು ಜಾಗ್ರತೆ ಆಟ್ ಲೀಸ್ಟ್ ೭೫ ಪರ್ಸೆಂಟ್‌ನಷ್ಟಾದರೂ ಸಂಘಗಳನ್ನು ಕಾರ್ಯಗತ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.